ಸಂ೦೫೨-330-ಕಅ 4+1

# ಕರ್ನಾಟಕ ವಿಧಾನ ಪರಿಷತ್ತು

## ಶ್ರೀ ಮರಿತಿಬ್ಬೇಗೌಡ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ನಿಯಮ 330 ರಡಿಯಲ್ಲಿ ಮಂಡಿಸಿರುವ ಸೂಚನೆಗೆ ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಾರಿಗೆ ಸಚಿವರ ಉತ್ತರ

**ವಿಷಯ:-**

ಬೆಂಗಳೂರು ನಗರದ ಎಲೆಕ್ಟ್ರಾನಿಕ್ ಸಿಟಿ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಆನೇಕಲ್, ಸರ್ಜಾಪುರ ಈ ಎರಡು ಪ್ರದೇಶಗಳಲ್ಲಿ ವಾಸವಾಗಿರುವುದಾಗಿ ನಕಲಿ ವಿಳಾಸ ನೀಡಿ, 2015 ನೇ ಸಾಲಿನಿಂದ ಭಾರತ್-03 ವಾಯು ಮಾಲಿನ್ಯ 4 ಚಕ್ರದ ಸಾವಿರಾರು ವಾಹನಗಳನ್ನು ಕಾನೂನು ಬಾಹಿರವಾಗಿ ಅಧಿಕಾರಿಗಳು ಶಾಮೀಲಾಗಿ ನೋಂದಣಿ ಮಾಡಿ, ಅತೀವ ವಾಯು ಮಾಲಿನ್ಯ ಉಂಟು ಮಾಡಿರುವುದಲ್ಲದೆ, ಇಲಾಖೆಯ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿಗಳ ನಷ್ಟವನ್ನು ಉಂಟು ಮಾಡಿರುವ ಗಂಭೀರ ಸಮಸ್ಯೆ ಕುರಿತು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:-**

ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ.G.S.R 84(E) ದಿನಾಂಕ:09-02-2009 ರಲ್ಲಿ ಅನುಕ್ರಮ ಸಂಖ್ಯೆ 2(ಸಿ) ರಲ್ಲಿ ಈ ಕೆಳಕಂಡಂತೆ ನಮೂದಿಸಲಾಗಿದೆ:

2(ಸಿ) after sub-rule (14) the following sub-rule shall be inserted with effect from the 1st day of April, 2010 namely:-

"(15) Mass Emission Standards (Bharat Stage – IV) for M and N category vehicles:-

(a) the Mass Emission Standards for Bharath Stage – IV shall come into force in the National Capital Region and the cities of Mumbai, Kolkata, Chennai, Bangalore, Hyderabad including Secunderabad, Ahmedabad, Pune, Surat, Kanpur and Agra in respect of four wheeled vehicles manufactured on or after the 1st April, 2010 except the four-wheeled transport vehicles plying on Inter-State permits or National Permits or All India Tourist Permits, within the jurisdiction of these cities."

ಅದರಂತೆ, ಪ್ರಾದೇಶಿಕ ಸಾರಿಗೆ ಕಛೇರಿ, ಎಲೆಕ್ಟ್ರಾನಿಕ್ ಸಿಟಿ ಕಛೇರಿಯ ವ್ಯಾಪ್ತಿಯಲ್ಲಿ ಬೆಂಗಳೂರು ಗ್ರಾಮಾಂತರ ವ್ಯಾಪ್ತಿಯ ಆನೇಕಲ್ ಮತ್ತು ಸರ್ಜಾಪುರ ಪ್ರದೇಶಗಳು ಸಹ ಸೇರಿರುತ್ತವೆ ಹಾಗೂ ರಾಷ್ಟ್ರೀಯ ರಹದಾರಿ, ಅಖಿಲ ಭಾರತ ಪ್ರವಾಸಿ ರಹದಾರಿ ಮತ್ತು ಅಂತರಾಜ್ಯ ರಹದಾರಿ ಪಡೆದಿರುವ ಭಾರತ್ ಸ್ಟೇಜ್-3 ವಾಹನಗಳಿಗೆ ನೋಂದಣಿ ಮಾಡಲು ಅವಕಾಶವಿರುತ್ತದೆ. ಅದರಾನುಸಾರ, ಆನೇಕಲ್, ಸರ್ಜಾಪುರ ಎರಡೂ ಪ್ರದೇಶಗಳ ವಾಹನ ಮಾಲೀಕರ ವಿಳಾಸಗಳ ದಾಖಲೆಗಳಾನುಸಾರ ಭಾರತ್ ಸ್ಟೇಜ್-3 ವಾಹನಗಳ ನೋಂದಣಿ ಮಾಡಲಾಗಿರುತ್ತದೆ.

ವಾಹನಗಳ ನೋಂದಣಿಯಾಗುವ ಸಮಯದಲ್ಲಿ ಭಾರತ್ ಸ್ಟೇಜ್-3 ವಾಹನಗಳಿಗೆ ಇನ್‌ವಾಯ್ಸ್‌ನಲ್ಲಿ ನಮೂದಿಸಿರುವ ವಾಹನದ ಮಾರಾಟ ಮೊತ್ತವು ತಯಾರಕರು ನೀಡಿದ ಮೊತ್ತವಾಗಿದ್ದು, ಅದರಂತೆ ತೆರಿಗೆಯನ್ನು ಆಕರಿಸಲಾಗುತ್ತಿದ್ದು, ಇದರಲ್ಲಿ, ಯಾವುದೇ ತರಹದ ರಾಜಸ್ವ ನಷ್ಟವಾಗಿರುವುದಿಲ್ಲ.

ಮುಂದುವರೆದು, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದ ಅಧಿಸೂಚನೆ ಆದೇಶಾನುಸಾರ G.S.R 643(E) ದಿನಾಂಕ:01-04-2017 ರಿಂದ ಬಿಎಸ್ IV ವಾಹನಗಳನ್ನು ದೇಶಾದ್ಯಂತ ಕಡ್ಡಾಯವಾಗಿ ನೋಂದಣಿ ಮಾಡಲು ಆದೇಶಿಸಲಾಗಿದ್ದು, ಅದರನ್ವಯ, ಬಿಎಸ್ IV ವಾಹನಗಳನ್ನು ಮಾತ್ರ ರಾಜ್ಯದಲ್ಲಿ ನೋಂದಣಿ ಮಾಡಲಾಗುತ್ತಿದೆ.

ವಾಹನಗಳ ವಾಯುಮಾಲಿನ್ಯಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಭಾರತ್ ಸ್ಟೇಜ್-3 ವಾಹನಗಳಿಗೆ ಪ್ರತಿ 6 ತಿಂಗಳಿಗೊಮ್ಮೆ ವಾಯುಮಾಲಿನ್ಯ ನಿಯಂತ್ರಣದಲ್ಲಿದೆ ಎಂಬ ಪ್ರಮಾಣಪತ್ರಗಳನ್ನು ಪಡೆಯಲಾಗುತ್ತಿದ್ದು, ಭಾರತ್ ಸ್ಟೇಜ್-4 ವಾಹನಗಳು ನೋಂದಣಿಯಾದ ಒಂದು ವರ್ಷದ ತರುವಾಯ ಪ್ರತಿ 12 ತಿಂಗಳಿಗೊಮ್ಮೆ ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರ ಹೊಂದುವುದು ಕಡ್ಡಾಯವಾಗಿರುತ್ತದೆ. ಇದರೊಂದಿಗೆ, ವಾಯುಮಾಲಿನ್ಯವುಂಟು ಮಾಡುವ ವಾಹನಗಳ ಮೇಲೆ ಕಾನೂನು ರೀತ್ಯಾ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಟಿಡಿ 35 ಟಿಡಿಕ್ಯೂ 2019

(ಲಕ್ಷ್ಮಣ ಎಸ್. ಸವದಿ)
ಉಪ ಮುಖ್ಯಮಂತ್ರಿಗಳು
ಹಾಗೂ ಸಾರಿಗೆ ಸಚಿವರು